# ಕರ್ನಾಟಕ ವಿಧಾನ ಸಭೆ

# KARNATAKA LEGISLATIVE ASSEMBLY

ಬುಧವಾರ 15ನೇ ಏಪ್ರಿಲ್ 1998 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.30 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : **(ಶ್ರೀ ಚಂದ್ರಶೇಖರ್ ಎಂ. ಮಾಮನಿ)** ಅವರು

ಪೀಠವನ್ನು ಅಲಂಕರಿಸಿದ್ದರು.

## ಸಂತಾಪ ಸೂಚನೆ

ಉಪಾಧ್ಯಕ್ಷರು : ಮಾಜಿ ಶಾಸಕರಾದ ಶ್ರೀ ಎನ್.ಜಿ. ನಾಯಕ್‌ರವರು ದಿನಾಂಕ : 7-4-98 ರಂದು ನಿಧನರಾದದ್ದನ್ನು ವಿಷಾದದಿಂದ ಈ ಸದನಕ್ಕೆ ತಿಳಿಸುತ್ತಿದ್ದೇನೆ.

ಶ್ರೀಯುತರು 1983-84 ರವರೆಗೆ 7ನೇ ವಿಧಾನಸಭೆ ಹಾಗೂ 1989 -94ರವರೆಗೆ 9ನೇ ವಿಧಾನ ಸಭೆಗೆ ಮೊಳಕಾಲ್ಮೂರು ಕ್ಷೇತ್ರದಿಂದ ಆಯ್ಕೆಯಾಗಿ ಮೊಳಕಾಲ್ಮೂರು ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿರುತ್ತಾರೆ. ಶ್ರೀಯುತರು ದೀನದಲಿತರ, ಹಿಂದುಳಿದ ವರ್ಗಗಳ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳವರ ಅಭಿವೃದ್ಧಿಗಾಗಿ ಶ್ರಮಿಸಿರುತ್ತಾರೆ. ಹಾಗೂ ಕೆಲವು ಕಾಲ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಒಂದು ನಿಮಿಷ ಮೌನವನ್ನಾಚರಿಸಿತು).

ಉಪಾಧ್ಯಕ್ಷರು : ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

### ಕುಡಿಯುವ ನೀರಿನ ಸಮಸ್ಯೆ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಅದಕ್ಕೂ ಮೊದಲು ಎರಡು ಪ್ರಮುಖವಾದ ವಿಚಾರಗಳಿವೆ. ಅವುಗಳೆಂದರೆ ಕುಡಿಯುವ ನೀರಿನ ಬಗ್ಗೆ ಮತ್ತು 97-98ನೇ ಸಾಲಿನಲ್ಲಿ ನಿಗದಿಪಡಿಸಿದ್ದ ಹಣವೂ ಸಹ ಬಿಡುಗಡೆಯಾಗದಿರುವುದು.

ಉಪಾಧ್ಯಕ್ಷರು : ಪ್ರಶ್ನೋತ್ತರ ಮುಗಿದ ಮೇಲೆ ಅದನ್ನು ತೆಗೆದುಕೊಳ್ಳೋಣ.

## ರೈತರ ಬೆಳೆ ನಾಶವಾಗಿರುವ ಬಗ್ಗೆ ಸದನದ ಸಮಿತಿಯ ವರದಿ ಮೇಲೆ ಚರ್ಚೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಭಾಧ್ಯಕ್ಷರೆ, ಮತ್ತೊಂದು ಮುಖ್ಯವಾದ ವಿಚಾರವೊಂದಿದೆ. ತಾವು ಪ್ರಶ್ನೋತ್ತರ ವೇಳೆಯ ನಂತರ ಅದರ ಬಗ್ಗೆ ತೆಗೆದುಕೊಳ್ಳುವುದಾದರೆ ಎರಡು ಮಾತಿಲ್ಲ. ರಾಜ್ಯಪಾಲರ ಭಾಷಣದಲ್ಲೂ ಇದರ ಬಗ್ಗೆ ಪ್ರಸ್ತಾಪವಾಗಿದೆ. ಬೆಳೆ ನಾಶವಾಗಿ ಸಾಲವನ್ನು ಕಟ್ಟಲಾರದೆ ಅನೇಕ ಜನ ರೈತರು ಪ್ರಾಣವನ್ನು ಕಳೆದುಕೊಂಡಿದ್ದಾರೆ. ಇದರ ಬಗ್ಗೆ ವರದಿ ಮಾಡಲು ಸದನದ ಸಮಿತಿಯನ್ನು ಅಲ್ಲಿಗೆ ಕಳುಹಿಸಿಕೊಡಲಾಗಿತ್ತು. ತಾವು ಇದರ ಬಗ್ಗೆ ಹೆಚ್ಚು ಮಹತ್ವವನ್ನು ಕೊಟ್ಟು ಚರ್ಚೆಮಾಡಲು ಅವಕಾಶ ಮಾಡಿಕೊಡಬೇಕು. ಸದನದ ಸಮಿತಿಯವರು ಏನು ವರದಿ ಕೊಟ್ಟಿದ್ದಾರೆ, ಏನು ನೋಡಿಕೊಂಡು ಬಂದಿದ್ದಾರೆ, ಏನು ಸಲಹೆ ಕೊಟ್ಟಿದ್ದಾರೆ, ಸರ್ಕಾರವೇನು ಇದುವರೆಗೆ ಮಾಡಿದ್ದಾರೆ ಎಂಬ ಬಗ್ಗೆ ಮೊದಲು ಚರ್ಚೆಗೆ ಅವಕಾಶ ಮಾಡಿಕೊಟ್ಟು ಮಧ್ಯಾಹ್ನ ಪ್ರಶ್ನೋತ್ತರವನ್ನು ತೆಗೆದುಕೊಂಡರು ಪರವಾಗಿಲ್ಲ. ಇದಕ್ಕೆ ಮೊದಲ ಆಧ್ಯತೆ ಕೊಡಿ. ಇದು ಮಹತ್ವವಾದ ವಿಚಾರವಲ್ಲವೆ? ಸದನದ ಸಮಿತಿ ಕಳುಹಿಸಿಕೊಟ್ಟಿದ್ದೇವೆ, ಅವರು ತುರ್ತಾಗಿ ವರದಿಯನ್ನು ತಂದು ಕೊಟ್ಟಿದ್ದಾರೆ, ಸರ್ಕಾರವೇನು ಕ್ರಮ ತೆಗೆದುಕೊಂಡಿದೆ?

ಉಪಾಧ್ಯಕ್ಷರು : ಮೊದಲು ಪ್ರಶ್ನೋತ್ತರ ತೆಗೆದುಕೊಳ್ಳೋಣ, ತಾವು ದಯಮಾಡಿ ಸಹಕಾರ ನೀಡಬೇಕು.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸದನದ ಸಮಿತಿ ಅಲ್ಲಿಗೆ ಭೇಟಿ ನೀಡಿದೆ. ಅವರು ವಿಷಯವನ್ನು ಸಂಗ್ರಹ ಮಾಡುತ್ತಿದ್ದಾರೆ. ಎರಡೂ ಸದನಗಳಿಗೆ ಒಂದೆರಡು ದಿವಸಗಳಲ್ಲಿ ವರದಿಯನ್ನು ಕೊಡುವವರಿದ್ದಾರೆ. ವರದಿ ಬರದೆ ಇಲ್ಲಿ ಚರ್ಚೆ ಮಾಡುವುದು ಹೇಗೆ ಸಾಧ್ಯ? ವರದಿ ಬರದೆ ಚರ್ಚೆ ಮಾಡಲು ಯಾವ ನಿಯಮದಲ್ಲಿ ಅವಕಾಶವಿದೆ? ನಿಯಮದ ಪ್ರಕಾರ ನಾವು ಸದನದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ವರದಿ ಇಲ್ಲದೆ ಯಾವ ನಿಯಮದ ಪ್ರಕಾರ ಚರ್ಚೆ ಮಾಡುವುದು?

ಉಪಾಧ್ಯಕ್ಷರು : ನಾವೆಲ್ಲರೂ ಸೇರಿಯೇ ಸದನದ ಸಮಿತಿಯನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. ಸದನದ ಸಮಿತಿಯಿಂದ ವರದಿ ಬಂದಮೇಲೆ ಇದರ ಬಗ್ಗೆ ಚರ್ಚೆ ಮಾಡೋಣ. ವರದಿ ಇಲ್ಲದೆ ಚರ್ಚೆ ಮಾಡುವುದಾದರೂ ಹೇಗೆ?

(ಗೊಂದಲ)

ಶ್ರೀ ಸಿ. ಬೈರೇಗೌಡ : ಚರ್ಚೆಗೆ ನಮ್ಮ ಅಭ್ಯಂತರವೇನಿಲ್ಲ, ನಾವು ಇಲ್ಲಿ ನಿಯಮಗಳನ್ನು ಪಾಲನೆ ಮಾಡಬೇಕಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಅಲ್ಲಿಗೆ ಸದನದ ಸಮಿತಿ ಹೋಗಿದೆ, ಅದು ತನ್ನ ಮೊದಲ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ.